ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಬಿಸಿಡಿ/679/2021/ಅ.ನಿ.ವಿ-9. ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 08/08/2024.

:: ಹಿಂಬರಹ ::

ವಿಷಯ: ಪ್ರಕರಣ ಮುಕ್ತಾಯಗೊಂಡ ಬಗ್ಗೆ

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗೌರವಾನ್ವಿತ ಉಪಲೋಕಾಯುಕ್ತ ರವರ ಆದೇಶದನ್ವಯ ಮೇಲ್ಕಂಡ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ. ಈ ಸಂಬಂಧ ಗೌರವಾನ್ವಿತ ಉಪಲೋಕಾಯುಕ್ತ ರವರ ಆದೇಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.

20/8/24

ಅಪರ ನಿಬಂಧಕರು ವಿಚಾರಣೆಗಳು-9
ಕರ್ನಾಟಕ ಲೋಕಾಯುಕ್ತ
ಬೆಂಗಳೂರು.

ಇವರಿಗೆ:

ದೂರುದಾರರು:

B.T. LAKSHMI VENKATESH	President, Kadamba Nagarika Hitarakshana Samithi (R), Home no. 836, 3rd Cross Road, Munikondappa Layout, Nagasandra Post, Bagalagunte, Ward no. 14, Bengaluru-560073 M.No: 94484-30434

ಎದುರುದಾರರು:

1) ASSISTANT EXECUTIVE ENGINEER	Dasarahalli Zone, Ward no. 14, Dasarahalli, BBMP, Bengaluru-560073.
2) ASSISTANT ENGINEER	Dasarahalli Zone, Ward no. 14, Dasarahalli, BBMP, Bengalur-560073.
3) EXECUTIVE ENGINEER	Dasarahalli Zone, Ward no. 14, Dasarahalli, BBMP, Bengaluru-560073.

ದಿನಾಂಕ 19/8/24
ಕ್ರ.ಸಂ 501

86) ಎ.ಆರ್.ಇ-9 /679/2021

ಈ ಪ್ರಕರಣದಲ್ಲಿ ದಾಸರಹಳ್ಳಿ ವಲಯದ ವಾರ್ಡ್ ನಂ:14ರಲ್ಲಿ 014-19-000023, 014-19-000024, 014-19-000025, 014-19-000026, ಈ ಜಾಬ್ ಕೋಡುಗಳಿಗೆ ಸಂಬಂಧಪಟ್ಟಂತೆ ಸ್ಥಳದಲ್ಲಿ ಯಾವುದೇ ಕಾಮಗಾರಿಗಳನ್ನು ನಿರ್ವಹಿಸದೆ ಮತ್ತು ಹಿಂದಿನ ಯಾವುದೋ ಕಾಮಗಾರಿ ನಿರ್ಮಿಸಿರುವ ಜಿ.ಪಿ.ಎಸ್. ಛಾಯಾ ಚಿತ್ರಗಳನ್ನು ಅಪ್ ಲೋಡ್ ಮಾಡಿ, ಕಾಮಗಾರಿ ಬಿಲ್ಲುಗಳನ್ನು ಐ.ಎಫ್.ಎಂ.ಎಸ್‌ನಲ್ಲಿ ಬಿ.ಆರ್ ಹಾಕಿರುತ್ತಾರೆ ಮತ್ತು ಕಂಪ್ಲೀಷನ್ ವರದಿಗೆ ಸಿ.ಇ. ರವರ ಸಹಿ ಪಡೆಯದೆ ಹಾಗೂ ರೋಡ್ ಇಸ್ಪರಿ ಇಲ್ಲದೆ, ಎಸ್.ಪಿ.ಆರ್ ಮತ್ತು ಬಿಆರ್ ಅನ್ನು ಹಾಕಿರುವುದು ಅಕ್ರಮವಾಗಿರುತ್ತದೆ ಎಂದು ಆರೋಪಿಸಿರುತ್ತಾರೆ ಮತ್ತು ಎದುರುದಾರರ ವಿರುದ್ಧ ಕ್ರಮ ಜರುಗಿಸಲು ಕೋರಿರುತ್ತಾರೆ.

87)ಸದರಿ ದೂರಿನ ಮೇಲೆ 1 ರಿಂದ 3ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

88) 1 ಮತ್ತು 2ನೇ ಎದುರುದಾರರು ಒಂದೇ ರೀತಿಯ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಸದರಿ ಆಕ್ಷೇಪಣೆಯಲ್ಲಿ ಈ ದೂರಿನಲ್ಲಿ ನಮೂದಿಸಿರುವ ಕಾಮಗಾರಿಗಳ ಆನ್‌ಲೈನ್ ಎಸ್.ಪಿ.ಆರ್.ಗಳನ್ನು ಇ.ಇ (ದ.ವಿ) ರವರ ಸೂಚನೆಯಂತೆ ಹಿಂಪಡೆಯಾಗಿದೆ ಎಂದು ಮತ್ತು ಅವರು ಸದರಿ ಕಾಮಗಾರಿಗಳ ಮೇಲ್ಸ್ತುವಾರಿಯನ್ನು ನಿರ್ವಹಿಸಿರುವುದಿಲ್ಲವೆಂದು, ಬಿಲ್ಲನ್ನು ಮತ್ತು ಎಸ್.ಬಿ.ಆರ್ ಅನ್ನು ದಾಖಲಿಸಿರುವುದಿಲ್ಲವೆಂದು ಮತ್ತು ಪ್ರಕರಣದಿಂದ ಕೈಬಿಡುವಂತೆ ಕೋರಿರುತ್ತಾರೆ.

89)3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸದರಿ ಪ್ರಕರಣದಲ್ಲಿ ಮಾರ್ಪಾಡು ಅಂದಾಜು, work completion certificate and road history ಗಳು ಅನುಮೋದನೆಯಾಗದೆ ಇರುವ ಕಾರಣ ಅವರು ಅಳತೆಗಳನ್ನು ಪರಿಶೀಲಿಸಿರುವುದಿಲ್ಲ ಹಾಗೂ ದೃಡೀಕರಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ವಿಭಾಗ ಕಛೇರಿಯಿಂದ ನಿಯಮಾನುಸಾರ ಪಾವತಿಗಾಗಿ ಸಿ.ಇ. ಟಿ.ವಿ.ಸಿ.ಸಿ ರವರಿಂದ ಪರಿಶೀಲಿಸಿದ ನಂತರ ಪಾವತಿಗಾಗಿ ಮುಖ್ಯ ಲೆಕ್ಕಾಧಿಕಾರಿರವರಿಗೆ ಸಲ್ಲಿಸುವ ಪ್ರಕ್ರಯೆ ಮುಂದುವರಿಸದೆ ಎ.ಇ.ಇ., ರವರಿಗೆ ಹಿಂದಿರುಗಿಸಲಾಗಿದೆ ಎಂದು ತಿಳಿಸಿರುತ್ತಾರೆ ಮತ್ತು ದೂರುದಾರರು ತಿಳಿಸಿರುವಂತೆ ಹಣ ಪಾವತಿಗಾಗಿ ಯಾವುದೇ ಪ್ರಕ್ರಯೆ ಮುಂದುವರಿಸಿರುವುದಿಲ್ಲವೆಂದು ಮತ್ತು ಪ್ರಕರಣದಿಂದ ಕೈಬಿಡುವಂತೆ ಕೋರಿರುತ್ತಾರೆ.

90)ದಿ: 20.10.2022ರ ಆದೇಶದ ಪ್ರಕಾರ ಈ ಪ್ರಕರಣವನ್ನು ಸಿ.ಇ., ತಾಂತ್ರಿಕ ವಿಭಾಗ, ಕ.ಲೋ ಬೆಂಗಳೂರು ರವರಿಗೆ ವಹಿಸಿ ತನಿಖೆ ನಡೆಸಿ ವರದಿ ಸಲ್ಲಿಸಲು ಸೂಚಿಸಲಾಗಿತ್ತು.

91)ಶ್ರೀ. ಗುರುಪ್ರಸಾದ್, ಎ.ಇ., ರವರು ಈ ಪ್ರಕರಣದ ತನಿಖೆ ನಡೆಸಿ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ

<u>ಕಾಮಗಾರಿ ಹೆಸರು:-</u>

(1)Asphalting to roads @ Defence colony and surrounding area in ward No. 14 Bagalakunte ಗೆ ಸಂಬಂಧಪಟ್ಟಂತೆ ಪೂರ್ಣಗೊಂಡಿರುತ್ತದೆ

(2)Asphalting to roads @ Munikondappa Layout and surrounding area in Ward No. 14 Bagalakunte ಗೆ ಸಂಬಂಧಪಟ್ಟಂತೆ ಪೂರ್ಣಗೊಂಡಿರುತ್ತದೆ.

(3)Asphalting to roads @ Manjunathanagara and surrounding area in Ward No. 14 Bagalakunte ಗೆ ಸಂಬಂಧಪಟ್ಟಂತೆ ಪೂರ್ಣಗೊಂಡಿರುತ್ತದೆ.

(4) Asphalting to roads @ Ashoknagara and surrounding area in Ward No. 14 Bagalakunte ಗೆ ಸಂಬಂಧಪಟ್ಟಂತೆ ಪೂರ್ಣಗೊಂಡಿರುತ್ತದೆ ಎಂದು ತಿಳಿಸಿರುತ್ತಾರೆ ಮತ್ತು ದೂರಿನಲ್ಲಿ ಮಾಡಿರುವ ಆರೋಪಗಳು ಸಾಬೀತಾಗಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಸದರಿ ತನಿಖಾ ವರದಿಯ ಜೊತೆ ಎಲ್ಲಾ ಕಾಮಗಾರಿಗಳಿಗೆ ಸಂಬಂಧಪಟ್ಟ ಜಿ.ಪಿ.ಎಸ್. ಹೊಂದಿರುವ ಭಾವ ಚಿತ್ರಗಳನ್ನು ಲಗತ್ತಿಸಿರುತ್ತಾರೆ.

92)ಸದರಿ ತನಿಖಾ ವರದಿ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಯಿತು.

93)ದೂರುದಾರರು ದಿ:20.3.2024ರ ಪತ್ರದ ಮೂಲಕ ತನಿಖಾ ವರದಿ ಮೇಲೆ ಪ್ರತ್ಯುತ್ತರ ಸಲ್ಲಿಸಿರುತ್ತಾರೆ. ದಿ: 20.7.2024ರಂದು ದೂರುದಾರರು ಖುದ್ದು ಹಾಜರಾಗಿ ದಿ: 20.7.2024 ಪತ್ರವನ್ನು ಸಲ್ಲಿಸಿರುತ್ತಾರೆ ಮತ್ತು ಅದರ ಜೊತೆ ಎರಡು ಪ್ರಮಾಣ ಪತ್ರಗಳನ್ನು ಸಲ್ಲಿಸಿರುತ್ತಾರೆ.

94)ಸದರಿ ಎರಡೂ ಪತ್ರಗಳಲ್ಲಿ ಮತ್ತು ಪ್ರಮಾಣ ಪತ್ರಗಳಲ್ಲಿ ದೂರುದಾರರು ದೂರಿನಲ್ಲಿ ಹೇಳಿರುವ ಕಾಮಗಾರಿಗಳನ್ನು ಗುತ್ತಿಗೆದಾರರು ತೃಪ್ತಿಕರವಾಗಿ ಪೂರ್ಣಗೊಳಿಸಿದ್ದಾರೆಂದು ತಿಳಿಸಿರುತ್ತಾರೆ ಮತ್ತು ಈ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

95)ಕಡತವನ್ನು ಪರಿಶೀಲಿಸಲಾಯಿತು, ಈ ಪ್ರಕರಣದಲ್ಲಿ ದೂರುದಾರರು ನಾಲ್ಕು ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಸ್ಥಳದಲ್ಲಿ ಯಾವುದೇ ಕಾಮಗಾರಿಗಳನ್ನು ನಿರ್ವಹಿಸದೆ completion report ಗೆ ಸಿ.ಇ ರವರ ಸಹಿ ಪಡೆಯದೆ ಹಾಗೂ road history ಇಲ್ಲದೆ ಮತ್ತು ಎಸ್.ಪಿ.ಆರ್ ಮತ್ತು ಬಿ.ಆರ್.ಅನ್ನು ಹಾಕಿರುವುದು ಕಾನೂನಿಗೆ ವಿರುದ್ಧವಾಗಿದೆ ಎಂದು ಆರೋಪಿಸಿರುತ್ತಾರೆ. 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಎಲ್ಲಾ ಪ್ರಕ್ರೀಯೆಗಳನ್ನು ಅನುಸರಿಸಿ ನಿಯಮಾನುಸಾರ ಕಡತವನ್ನು ಸಂಬಂಧಪಟ್ಟ ಅಧಿಕಾರಿಗಳ ಮೂಲಕ ಮಂಡಿಸುವಂತೆ ಸೂಚನೆ ನೀಡಿ ವಾಪಸ್ಸು ಎ.ಇ.ಇ. ರವರ ಕಛೇರಿಗೆ ಹಿಂದಿರುಗಿಸಲಾಗಿದೆ ಎಂದು ತಿಳಿಸಿರುತ್ತಾರೆ. ಈ ಪ್ರಕರಣದಲ್ಲಿ ತನಿಖಾಧಿಕಾರಿಗಳು ಸ್ಥಳ ತನಿಖೆ ಮಾಡಿ ದೂರುದಾರರು ಹೇಳಿರುವ ಕಾಮಗಾರಿಗಳನ್ನು ಸರಿಯಾಗಿ ನಿರ್ವಹಿಸಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ಹಾಜರುಪಡಿಸಿರುವ ಭಾವ ಚಿತ್ರಗಳಲ್ಲಿ ರಸ್ತೆ

ಕಾಮಗಾರಿಗಳನ್ನು ಮಾಡಿರುವುದು ಕಂಡುಬರುತ್ತದೆ. ತನಿಖಾ ವರದಿಗೆ ದೂರುದಾರರು ಯಾವುದೇ ಆಕ್ಷೇಪಣೆ ಸಲ್ಲಿಸಿರುವುದಿಲ್ಲ ಮತ್ತು ಮುಂದುವರೆದು ಕಾಮಗಾರಿಗಳನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ್ದಾರೆಂದು ತಿಳಿಸಿರುತ್ತಾರೆ. ಆದ್ದರಿಂದ, ತನಿಖಾ ವರದಿಯನ್ನು ಒಪ್ಪಬಹುದಾಗಿರುತ್ತದೆ. ದೂರಿನಲ್ಲಿ ಹೇಳಿರುವ ಆರೋಪಗಳನ್ನು ಸಾಬೀತುಪಡಿಸುವಂತ ಯಾವುದೇ ದಾಖಲೆಗಳು ಕಂಡುಬರುವುದಿಲ್ಲ. ದೂರುದಾರರು ಹೇಳಿರುವ ರಸ್ತೆ ಕಾಮಗಾರಿಗಳನ್ನು ಎದುರುದಾರರು ನಿರ್ಮಾಣ ಮಾಡಿರುವ ಕಾರಣ ದೂರುದಾರರ ಕುಂದು ಕೊರತೆಗಳು ನಿವಾರಣೆಯಾಗಿರುತ್ತದೆ. ಈ ಪ್ರಕರಣದಲ್ಲಿ ಸರ್ಕಾರಕ್ಕೆ ಯಾವುದೇ ರೀತಿಯ ನಷ್ಟ ಉಂಟಾಗಿರುವುದಿಲ್ಲ. ಆದ್ದರಿಂದ ಈ ಪ್ರಕರಣವನ್ನು ಈ ಹಂತದಲ್ಲಿ ಮುಕ್ತಾಯಗೊಳಿಸಬಹುದಾಗಿದೆ.

96) ಆದ್ದರಿಂದ ಗೌರವಾನ್ವಿತರು ಒಪ್ಪಿದಲ್ಲಿ, (1)ತನಿಖಾಧಿಕಾರಿಗಳ ವರದಿಯನ್ನು ಒಪ್ಪಿ ಈ ಪ್ರಕರಣವನ್ನು ಈ ಹಂತದಲ್ಲೇ ಮುಕ್ತಾಯಗೊಳಿಸಬಹುದಾಗಿದೆ.

(2) ದೂರುದಾರರಿಗೆ ಮತ್ತು 1 ರಿಂದ 3ನೇ ಎದುರುದಾರರಿಗೆ ಈ ಟಿಪ್ಪಣಿಯ ಆದೇಶದ ನಕಲನ್ನು ಕಳುಹಿಸಬಹುದಾಗಿದೆ.

(3) ಸದರಿ ಕಡತವನ್ನು 'ಸಿ' ವಿಲೇವಾರಿ ಉಗ್ರಾಣ ಶಾಖೆಗೆ ಕಳುಹಿಸಬಹುದಾಗಿದೆ.

ಗೌರವಾನ್ವಿತರ ಆದೇಶಕ್ಕಾಗಿ ಕಡತವನ್ನು ಮಂಡಿಸಲಾಗಿದೆ.

20/7/2021

ಎ.ಆರ್.ಇ-9

97)ಗೌರವಾನ್ವಿತ ಉಪಲೋಕಾಯುಕ್ತ-1ರವರು)

ಅಧಿಕಾರಿಯ 96 (1) ಉಪ (ಕ) ನ್ವಯ ಕಾರ್ಯಾದೇಶ ಹೊರಡಿಸಲು ಕೋರಿದೆ.

23/7/21